**Udayavaani**

Date: Saturday, March 22, 2014 Page No.4

Edition: Mysore Language: Kannada

# 178 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

## ■ ಎಸ್‌ಡಿಎಂ ಕಾಲೇಜಿನ 19ನೇ ಘಟಿಕೋತ್ಸವ



**ಮೈಸೂರಿನಲ್ಲಿ ಶುಕ್ರವಾರ ನಡೆದ ಎಸ್‌ಡಿಎಂ ಕಾಲೇಜಿನ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು.**

**ಮೈಸೂರು:** ಅನುಕಂಪ ಮತ್ತು ಸೇವಾ ಮನೋಭಾವ ಇದ್ದರೆ ಮಾತ್ರ ಮತ್ತೊಬ್ಬರಿಗೆ ಸೇವೆ ಒದಗಿಸಲು ಸಾಧ್ಯ. ಇಲ್ಲದಿದ್ದರೆ ನಮ್ಮ ಶಿಕ್ಷಣ ಸಾರ್ಥಕತೆ ಪಡೆಯಲು ಸಾಧ್ಯವಿಲ್ಲ ಎಂದು ಮೈಂಡ್‌ಟ್ರೀ ಸಂಸ್ಥೆ ಅಧ್ಯಕ್ಷ ಸುಬ್ರೊತೊ ಬಗಚಿ ಅಭಿಪ್ರಾಯಪಟ್ಟರು.

ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣ ಅಭಿವೃದ್ಧಿ ಸಂಸ್ಥೆಯ (ಎಸ್‌ಡಿಎಂಐಎಂಡಿ) 2012 - 14ನೇ ಸಾಲಿನ ಪೋಸ್ಟ್ ಗ್ರಾಜುವೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ (ಪಿಜಿಡಿಎಂ) 19ನೇ ಘಟಿಕೋತ್ಸವ ಸಮಾರಂಭದಲ್ಲಿ ಶುಕ್ರವಾರ ಅವರು ಮಾತನಾಡಿದರು. ನಾವು ಎಷ್ಟೇ ಶಿಕ್ಷಣ ಪಡೆದರೂ ಮುಖ್ಯವಲ್ಲ. ನಮ್ಮ ಮನದಲ್ಲಿ ಅನುಕಂಪ ಮತ್ತು ಸೇವಾ ಮನೋಭಾವ ಇರಬೇಕು. ಅನುಕಂಪ ಮತ್ತು ಸೇವಾ ಮನೋಭಾವ ಇದ್ದರೆ ಮಾತ್ರ ಮತ್ತೊಬ್ಬರಿಗೆ ಸೇವೆ ಒದಗಿಸಲು ಸಾಧ್ಯ. ಇಲ್ಲದಿದ್ದರೆ ನಮ್ಮ ಶಿಕ್ಷಣ ಸಾರ್ಥಕತೆ ಪಡೆಯಲು ಸಾಧ್ಯವಿಲ್ಲವೆಂದರು.

ಈ ಸಂದರ್ಭದಲ್ಲಿ 2012-14ನೇ ಸಾಲಿನ ಪೋಸ್ಟ್ ಗ್ರಾಜುವೇಟ್ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್‌ನ 178 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವರುಣ್ ಕುಮಾರ್, ದೀಪಕ್ ನೆಸರಿಕರ್, ವಾಸುದೇವ್ ನಾಯಕ್, ಸ್ಫೂರ್ತಿ.ಎಸ್. ಗೌಡ, ಜುತಿಕಾ ಕಾಂದಾರ್ ಚಿನ್ನದ ಪದಕ ಪಡೆದರು.

ಎಸ್‌ಡಿಎಂಐಎಂಡಿಯ ಪಿಜಿಡಿಎಂ ಅಧ್ಯಕ್ಷೆ ನೀತು ಗಣಪತಿ, ವಾಣಿಜ್ಯೋದ್ಯಮಿ ಆರ್.ಗುರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಿವೃತ್ತ ನಿರ್ದೇಶಕ ಡಾ.ಕೆ.ಆರ್.ಶ್ರೀನಿವಾಸ ಮೂರ್ತಿ, ಡಾ. ಪ್ರಸನ್ನಚಂದ್ರ, ನಿರ್ದೇಶಕ ಡಾ. ಪರಶುರಾಮನ್ ಇದ್ದರು.